ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/319/ನಿವೃತ್ತಿ2023/ಸಿಆರ್3/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:14-07-2022

ಸುತ್ತೋಲೆ

ವಿಷಯ: 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಿ.ಎಡ್ ಚಿತ್ರಕಲಾ ಮತ್ತು ಕಾನೂನು ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಿ.ಎಡ್ ಚಿತ್ರಕಲಾ ಮತ್ತು ಕಾನೂನು ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ಪ್ರಾಂಶುಪಾಲರುಗಳು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ಕರ್ನಾಟಕ ನಾಗರೀಕ ಸೇವಾ ನಿಯಮ 96(2)ರ ಪ್ರಕಾರ ದಿನಾಂಕ:01-01-2023 ರಿಂದ 31-12-2023ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ. ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ನಮೂನೆಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ದಿನಾಂಕ:20-08-2022ರೊಳಗೆ ಅಂಚೆ ಮೂಲಕ ತುರ್ತಾಗಿ ಕಳುಹಿಸತಕ್ಕದ್ದು.

1. ನಿವೃತ್ತಿ ಹೊಂದಲಿರುವ ನೌಕರರುಗಳ ಜನ್ಮ ದಿನಾಂಕ ಹಾಗೂ ಮಾಹಿತಿಗಳನ್ನು ತಪ್ಪಾಗಿ ಕಳುಹಿಸಿ ಕೊಡುತ್ತಿರುವುದರಿಂದ ನೌಕರರ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ನೌಕರರ ಜನ್ಮ ದಿನಾಂಕ ಹಾಗೂ ಇತರೆ ಮಾಹಿತಿಗಳು ತಪ್ಪಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಕೂಲಂಕುಷವಾಗಿ ಪರಿಶೀಲಿಸಿ ನಿಖರವಾದ/ ಸ್ಪಷ್ಟ ಮಾಹಿತಿ ಕಳುಹಿಸಲು ನಿರ್ದೇಶಿಸಿದೆ.
2. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ಸೇವಾಪುಸ್ತಕ ಅಥವಾ ಇತರೆ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು.(S.S.L.C Marks card & Duty Report Copy) ಲಗತ್ತಿಸುವುದು
(ಒಂದು ವೇಳೆ ತಪ್ಪಾಗಿ ಮಾಹಿತಿಗಳನ್ನು ನೀಡಿದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಮುಂದಿನ ಆಗುಹೋಗುಗಳಿಗೆ ಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗುವುದು)
3. ಕಾಲೇಜಿನಲ್ಲಿ/ಕಛೇರಿಯಲ್ಲಿ ಯಾರೂ ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ಕಳುಹಿಸಿರುವ ನಮೂನೆಯಲ್ಲಿ "ಶೂನ್ಯ ವರದಿ" ಎಂದು ನಮೂದಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಿದೆ.
4. ನಿಯೋಜನೆ ಮೇಲೆ ತೆರಳಿರುವವರ ವಿವರಗಳನ್ನು ಮೂಲ ಕಾಲೇಜಿನವರು ಮಾತ್ರ ಸಲ್ಲಿಸುವುದು ಹಾಗೂ ಯಾವ ಕಾಲೇಜಿಗೆ ನಿಯೋಜನೆ ಮೇಲೆ ತೆರಳಿರುತ್ತಾರೆ ಎಂದು ಷರಾ ವಿಭಾಗದಲ್ಲಿ ನಮೂದಿಸಬೇಕು.
5. ಪ್ರಾಂಶುಪಾಲರುಗಳ ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.
6. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise)ಹಾಗೂ ನಮೂನೆಯಲ್ಲಿ ಬೋಧಕರ ವಿವರಪಟ್ಟಿ ಹಾಗೂ ಬೋಧಕೇತರರ ವಿವರ ಪಟ್ಟಿಯನ್ನು (Separate List of Teaching & Non Teaching) ಪ್ರತ್ಯೇಕವಾಗಿ ಬೇರೆ ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಮುಂದುವರೆದು ದಿನಾಂಕಗಳನ್ನು 01-01-2023 ಮಾದರಿಯಲ್ಲೇ(ಉದಾ ಚಿಹ್ನೆ: . , / ಉಪಯೋಗಿಸಬಾರದು) ನಮೂದಿಸಬೇಕು.

ಅಡಕ: ನಮೂನೆ

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಮತ್ತು ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ – (ಅಗತ್ಯ ಕ್ರಮಕ್ಕಾಗಿ).

2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಹೆಚ್ಚುವರಿ ಪ್ರತಿ ಹಾಗೂ ಕಛೇರಿ ಪ್ರತಿ

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| KGID No (as per HRMS) | Name | Designation | Subject Appointed for | Date of Birth | Date of Appointment | Incharge-Prinicipal | Date of Retirement in 2023 | Remarks |
|---|---|---|---|---|---|---|---|---|
| ಕೆಜಿಐಡಿ ಸಂಖ್ಯೆ | ಹೆಸರು | ಪದನಾಮ | ವಿಷಯ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯನಿರ್ವಹಿಸಿದ/ ನಿರ್ವಹಿಸುತ್ತಿರುವ ಕಾಲೇಜುಗಳ ಮತ್ತು ಅವಧಿ | 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | | 7 | 8 |
| | | | | | | | | |

ದೃಢೀಕರಣ:_ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ.

ಪ್ರಾಂಶುಪಾಲರು

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| KGID No. (as per HRMS) | Name | Designation | Date of Birth | Date of Appointment | Date of Retirement in 2023 | Remarks |
|---|---|---|---|---|---|---|
| ಕೆಜಿಐಡಿ ಸಂಖ್ಯೆ | ಹೆಸರು | ಪದನಾಮ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | 7 |
| | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/320/ನಿವೃತ್ತಿ2023/ಸಿಆರ್3/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:13-07-2022

ಸುತ್ತೋಲೆ

ವಿಷಯ: 2023ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ಹೊಂದಲಿರುವ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ (ಪದವಿ, ಕಾನೂನು, ಚಿತ್ರಕಲಾ ಹಾಗೂ ಬಿ.ಎಡ್) ಕಾಲೇಜುಗಳಲ್ಲಿ ದಿನಾಂಕ:01-01-2023 ರಿಂದ 31-12-2023ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ. ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ನಮೂನೆಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ದಿನಾಂಕ:20-08-2022ರೊಳಗೆ ಅಂಚೆ ಮೂಲಕ ತುರ್ತಾಗಿ ಕಳುಹಿಸತಕ್ಕದ್ದು.

1. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ತಮ್ಮ ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳೊಂದಿಗೆ ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು.
2. ಯಾರೂ ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ಕಳುಹಿಸಿರುವ ನಮೂನೆಯಲ್ಲಿ "ಶೂನ್ಯ ವರದಿ" ಎಂದು ನಮೂದಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಿದೆ.
3. ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.
4. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise)ಹಾಗೂ ನಮೂನೆಯಲ್ಲಿ ಬೋಧಕರ ವಿವರ ಪಟ್ಟಿ ಹಾಗೂ ಬೋಧಕೇತರರ ವಿವರ ಪಟ್ಟಿಯನ್ನು (Separate List of Teaching & Non Teaching)ಪ್ರತ್ಯೇಕವಾಗಿ ಬೇರೆ ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಮುಂದುವರೆದು ನಿವೃತ್ತಿ ದಿನಾಂಕಗಳನ್ನು 01-01-2023 ಮಾದರಿಯಲ್ಲೇ(ಉದಾ ಚಿಹ್ನೆ: . . / ಉಪಯೋಗಿಸಬಾರದು) ಮತ್ತು ವಿವರಗಳನ್ನು ಕನ್ನಡದಲ್ಲಿಯೇ ಕಡ್ಡಾಯವಾಗಿ ನಮೂದಿಸಬೇಕು.

ಅಡಕ: ನಮೂನೆ

13/07/22

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಖಾಸಗಿ ಅನುದಾನಿತ ಪದವಿ, ಬಿಎಡ್ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ತಮ್ಮ ಕಾಲೇಜಿನಲ್ಲಿ ನಿವೃತ್ತಿ ಹೊಂದಲಿರುವ ಸಿಬ್ಬಂದಿ ವರ್ಗದವರ ಬಗ್ಗೆ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ದಿನಾಂಕ:20-08-2022ರೊಳಗಾಗಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮಾತ್ರ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ವಿಷಯ (Subject) | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು